

ಪ್ರಮಾಣವಚನ ಸ್ವೀಕಾರ ಮಾಡಿದ ನಂತರ ಪರಸ್ಪರ ಅಭಿನಂದಿಸಿಕೊಂಡ ಬೈಡೆನ್ ಮತ್ತು ಕಮಲಾ ಹ್ಯಾರಿಸ್.

# ಅಮೆರಿಕದಲ್ಲಿ ಇನ್ನು ಫುಲ್ ಜೋಶ್

21/1/21

## ಜೋ ಬೈಡೆನ್, ಕಮಲಾ ಹ್ಯಾರಿಸ್ ಪ್ರಮಾಣ

ವಾಷಿಂಗ್ಟನ್: ಅಮೆರಿಕವೀಗ ಡೊನಾಲ್ಡ್ ಟ್ರಂಪ್ ಕಾಲದಿಂದ ಜೋ ಬೈಡೆನ್ ಕಾಲಕ್ಕೆ ಹೊರಳಿದೆ. ಥೇಟ್ ನಮ್ಮ ಸಂಕ್ರಾಂತಿಯಂತೆ... ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಹೊರಳುವಂತೆ ಅಲ್ಲೂ ಬಹುದೊಡ್ಡ ಸಂಕ್ರಮಣವೊಂದು ಜರುಗಿದೆ.

ಚುನಾವಣೆಯಲ್ಲಿನ ಸೋಲನ್ನೇ ಒಪ್ಪಿಕೊಳ್ಳಲು ಮೊಂಡಾಟ ಮಾಡಿ ತೆರಳಿದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹೊಸ ಅಧ್ಯಕ್ಷರಿಗೊಂದು ಶುಭ ಕೋರಿ, ಹೊಸ ಆಡಳಿತ ಚೆನ್ನಾಗಿರಲಿ ಎಂದಷ್ಟೇ ಹೇಳಿ ವೈಟ್ ಹೌಸ್‌ನಿಂದ ನಿರ್ಗಮಿಸಿದ್ದಾರೆ. ಅತ್ತ ಕ್ಯಾಪಿಟಲ್ ಹಾಲ್ ಬಳಿ ಜೋ ಬೈಡೆನ್ ಮತ್ತು ಕಮಲಾ ಹ್ಯಾರಿಸ್ ಅಮೆರಿಕದ ಹೊಸ ಜವಾಬ್ದಾರಿ ಹೊತ್ತಿದ್ದಾರೆ.

ಕೋವಿಡ್ ಹಿನ್ನೆಲೆಯಲ್ಲಿ ಹೆಚ್ಚು ಜನ ಸೇರದೇ ಬಿಗಿ ಭದ್ರತೆಯಲ್ಲಿ ಪ್ರಮಾಣ ವಚನ ಸಮಾರಂಭ ನಡೆಯಿತು. ಮೊದಲಿಗೆ ದೇಶದ 49ನೇ ಹಾಗೂ ಪ್ರಪ್ರಥಮ ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್ ಅವರು ಪ್ರಮಾಣ ಸ್ವೀಕರಿಸಿದರು. ನಂತರ ಮಂದಸ್ಮಿತರಂತೆ ಕಂಡು ಬಂದ ಜೋ ಬೈಡೆನ್, ಜಗತ್ತಿನ ದೊಡ್ಡಣ್ಣ ಎಂದೇ ಖ್ಯಾತಿವೆತ್ತಿರುವ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಇವರಿಗೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಪ್ರಮಾಣ ಬೋಧಿಸಿದರು.

150 ವರ್ಷಗಳ ನಂತರ ಇದೇ ಮೊದಲ ಬಾರಿಗೆ ನಿರ್ಗಮಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಂದು ಕೆಟ್ಟ ಸಂಪ್ರದಾಯಕ್ಕೂ ನಾಂದಿ ಹಾಡಿ ಹೋಗಿದ್ದಾರೆ. ಪದಗ್ರಹಣ ಸಮಾರಂಭದಲ್ಲಿ ಭಾಗಿಯಾಗದೇ, ನೇರವಾಗಿ ಫ್ಲೋರಿಡಾದಲ್ಲಿರುವ ತಮ್ಮ ಎಸ್ಟೇಟ್‌ಗೆ ಕುಟುಂಬ ಸಮೇತ ತೆರಳಿದ್ದಾರೆ. ಹೋಗುವಾಗ ನಾಲ್ಕು ಮಾತನಾಡಿ, ಹೊಸ ರೂಪದೊಂದಿಗೆ ಮತ್ತೆ ಬರುತ್ತೇನೆ ಎಂದೂ ಹೇಳಿ ಹೋಗಿದ್ದಾರೆ.

**ಚರ್ಚ್‌ನಲ್ಲಿ ಪ್ರಾರ್ಥನೆ:** ಪದಗ್ರಹಣ ಸಮಾರಂಭಕ್ಕೆ ತೆರಳುವ ಮುನ್ನ ನಿಯೋಜಿತ ಅಧ್ಯಕ್ಷ ಜೋ ಬೈಡೆನ್ ಮತ್ತು ಕಮಲಾ ಹ್ಯಾರಿಸ್ ಅವರು ಸೆಂಟ್ ಮ್ಯಾಥ್ಯೂ ಚರ್ಚ್‌ಗೆ ತೆರಳಿ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ದೇಶದ 2ನೇ ಕ್ಯಾಥೋಲಿಕ್ ಅಧ್ಯಕ್ಷರಾಗಲಿರುವ ಬೈಡೆನ್ ಅವರಿಗೆ, ಕಮಲಾ ಹ್ಯಾರಿಸ್, ಸ್ಪೀಕರ್ ನ್ಯಾನ್ಸಿ ಪೆಲೋಸಿ ಸೇರಿದಂತೆ ಹಲವು ನಾಯಕರು ಸಾಥ್ ನೀಡಿದರು.

### ಟ್ರಂಪ್ ನಿರ್ಧಾರಗಳು ವಾಪಸ್?

**ಪ್ರಮಾಣ ವಚನ ಸ್ವೀಕಾರ ಮಾಡಿರುವ ಜೋ ಬೈಡೆನ್ ಅವರು, ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತೆಗೆದುಕೊಂಡಿದ್ದ ಕೆಲವೊಂದು ವಿವಾದಾತ್ಮಕ ನಿರ್ಧಾರಗಳನ್ನು ವಾಪಸ್ ಪಡೆಯುವ ಸಾಧ್ಯತೆ ಇದೆ. ಜತೆಗೆ ಒಬಾಮ ಕಾಲದಲ್ಲಿ ತಂದಿದ್ದ ಕೆಲವೊಂದು ನಿರ್ಣಯಗಳನ್ನು [illegible] ಮೆಕ್ಸಿಕೋ ಗಡಿಯಲ್ಲಿ ಕಟ್ಟಲಾಗುತ್ತಿರುವ ಗೋಡೆ ಸ್ಥಗಿತ, ಪ್ಯಾರೀಸ್ ಒಪ್ಪಂದ ಹಾಗೂ ವಿಶ್ವ ಆರೋಗ್ಯ ಸಂಸ್ಥೆಗೆ ವಾಪಸ್, ವಲಸೆ ನೀತಿ ಬದಲಾವಣೆ ಸೇರಿದಂತೆ ಕೆಲವು ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ.**